

ಅದೊಂದು ಪುಟ್ಟ ಊರು. ಹೆಸರು ಯಾವುದಿದ್ದರೂ ನಡೆದೀತು. ಹೆಸರಿನಿಂದಲೇ ಎಲ್ಲವನ್ನೂ ನಿರ್ಧರಿಲಾಗದಷ್ಟೇ? 'ಸಾಗರ'ವೆಂಬ ಊರಿದೆ. ಆದರೆ ಅಲ್ಲಿ ಸಾಗರವೇ ಇಲ್ಲ! 'ಮೂರೂರು' ಎಂಬ ಊರಿದೆ. ಆದರೆ ಅದು ಒಂದೇ ಊರು! ಇರಲಿ. ಬೇಕೆಂದರೆ ನಾವು ಉಲ್ಲೇಖಿಸಿದ ಊರನ್ನು 'ನಿರ್ಮಲ ಹಳ್ಳಿ'ಯೆಂದು ಕರೆಯೋಣ. ಅದು ನಮ್ಮದೇ ದೇಶದಲ್ಲಿ ಇದೆಯೆಂದು ಭಾವಿಸುವ ಅಗತ್ಯವೂ ಇಲ್ಲ. ಜಗತ್ತು ವಿಶಾಲವಾಗಿದೆಯಷ್ಟೆ? ಸುಮಾರು 2,500 ಜನಸಂಖ್ಯೆ ಇರುವ ಈ ಊರಿನಲ್ಲಿ ಒಂದು ಪಂಚಾಯತವೂ ಇದೆ. ಕಾಲಕಾಲಕ್ಕೆ ಮಳೆಬೆಳೆಗಳಾಗುವಂತೆ ಗ್ರಾಮ ಪಂಚಾಯತಕ್ಕೆ ಚುನಾವಣೆಯ ಭಾಗ್ಯವೂ ಇದೆ. ಕೆಲವೇ ಕೆಲವು ಸರಕಾರೀ ಅಧಿಕಾರಿಗಳನ್ನು ಬಿಟ್ಟರೆ ಇಲ್ಲಿನ ಪ್ರತಿಶತ ಇಪ್ಪತ್ತರಷ್ಟು ಜನ ಕೆಳಮಧ್ಯಮ ವರ್ಗಕ್ಕೆ ಸೇರಿದವರು. ಈ ಜನ, ತಾವಾಯಿತು ತಮ್ಮ ಪ್ರಪಂಚವಾಯಿತು ಎನ್ನುತ್ತ ಬದುಕನ್ನು ಸಾಗಿಸುವವರು. ಅಂದ ಹಾಗೆ, ಈ ಸರಕಾರೀ ಅಧಿಕಾರಿಗಳು ಆ ಊರ ನಿವಾಸಿಗಳೇನಲ್ಲ. ಈ ಊರಿನಲ್ಲಿ ಉಳಿದುಕೊಳ್ಳಲು ಅವರಿಗೆ ತಕ್ಕ ಮನೆಗಳಿಲ್ಲ. ಅವರಾದರೂ ಏನು ಮಾಡಿಯಾರು? ಹೇಳಿ ಕೇಳಿ ಸರಕಾರೀ ನೌಕರಿ. ಇವರೆಲ್ಲ ತಾಲ್ಲೂಕಾ ಸ್ಥಳದಲ್ಲಿ ಮನೆ ಮಾಡಿ ದಿನವೂ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಪ್ರಯಾಣ ಮಾಡುತ್ತಾರೆ. ಬಹುಸಂಖ್ಯಾಕರು ಬಡತನದ ರೇಖೆಗಿಂತ ತೀರ ಕೆಳಗಿನ ಸ್ಥಿತಿಯಲ್ಲಿ ಕಳೆದುಹೋದವರು. ಈ ಜನಕ್ಕೆ ಬದುಕೆಂಬುದು ಒಂದು ದೊಡ್ಡ ಸವಾಲು. ಯಾರದೋ ಹೊಲದಲ್ಲಿ, ತೋಟದಲ್ಲಿ, ಯಾರದೋ ಮನೆಯ ಹಿತ್ತಲಲ್ಲಿ ಕೂಲಿ ಕೆಲಸ ಮಾಡಿಕೊಂಡು ಈ ಜನರು ಅಹನ್ಯಹನಿ ಜೀವನ ಮಾಡಬೇಕು. ಹಾಂ! ಈ ಊರಲ್ಲಿ ಸ್ವಲ್ಪ ಅನುಕೂಲಸ್ಥರು ಎನ್ನಿಸಿಕೊಳ್ಳುವ ನಾಲ್ಕೈದು ಕುಟುಂಬಗಳಿವೆ. ಈ ಕುಟುಂಬಗಳಲ್ಲೊಂದು ವ್ಯಾಪಾರವನ್ನವಲಂಬಿಸಿದೆ. ಈ ಊರಲ್ಲದೇ ಸುತ್ತಣ ಚಿಕ್ಕಪುಟ್ಟ ಹಳ್ಳಿಗಳಿಗೆ ಕಾಳುಕಡಿ, ಮೆಣಸು, ಉಪ್ಪು ಇತ್ಯಾದಿ ದಿನದ ಅಗತ್ಯಗಳನ್ನು ಪೂರೈಸುವದು ಇವರದೇ ಅಂಗಡಿ. ಇವರದೇ ಕುಟುಂಬದ ಇನ್ನೋರ್ವ ಸದಸ್ಯರು ಬಟ್ಟೆ ಅಂಗಡಿಯನ್ನು ನಡೆಸುತ್ತಾರೆ. ಬಡಜನರಿಗೆ ಸಣ್ಣ ಪ್ರಮಾಣದ ಸಾಲ ಕೊಡುವ ವ್ಯವಸ್ಥೆಯೂ ಇವರಲ್ಲಿದೆ. ಒಟ್ಟನಲ್ಲಿ ಊರ ಲೇವಾದೇವಿ ಈ ಕುಟುಂಬದಲ್ಲಿ ಕೇಂದ್ರೀಕೃತವಾಗಿದೆ. ಉಳಿದ ಮೂರು ಕುಟುಂಬದವರು ಕೃಷಿಕರು. ಈ ಕುಟುಂಬಗಳ ಹೊಲಗಳಲ್ಲಿ, ತೋಟಪಟ್ಟಿಗಳಲ್ಲಿ ಕೆಲಸ ಮಾಡಲು ಕೆಲಸದಾಳುಗಳ ತೊಂದರೆ ಎಂದಿಗೂ ಬಾಧಿಸಿಲ್ಲ. ಯಾಕೆಂದರೆ, ಈ ಊರಲ್ಲಿ ಈ ಜನಗಳೇ ಬಹುಸಂಖ್ಯಾಕರು. ಹೀಗಾಗಿ, ಕೂಲಿ ಕೆಲಸ ಮಾಡಲು ಈ ಜನಗಳಲ್ಲೇ ಪೈಪೋಟಿ ಇದೆ. ಸಹಜವಾಗಿ, ಈ ಜನಕ್ಕೆ ಸಿಗುವ ಪ್ರತಿಫಲ ಯಜಮಾನರು ಕೊಟ್ಟಷ್ಟು, ಇವರು ತೆಗೆದುಕೊಂಡಷ್ಟು.

ಚುನಾವಣೆ ಎಂದೆನಲ್ಲವೇ? ಈ ಕಾಲದಲ್ಲಿ ಚುನಾವಣೆಯ ಬಗ್ಗೆ ಮಾತನಾಡದಿದ್ದರೆ ಹೇಗೆ? ಈ ಊರಿನಲ್ಲಿ ಒಂದು ವಿಶೇಷವಿದೆ. ಕಳೆದ ಎರಡು ದಶಕಗಳಿಂದ ಒಬ್ಬರೇ ಚೇರ್ಮನ್ನರು! ಅವರು ಊರ ಒಂದೇ ಒಂದು ಸೊಸೈಟಿಯ ಅಧ್ಯಕ್ಷರು ಕೂಡ! ಈ ಕಾಯಂ ಚೇರ್ಮನ್ನರು ಈ ಐದು ಕುಟುಂಬಗಳಲ್ಲಿ ಒಂದರ